ಮಂಗಳೂರು ಮಹಾನಗರ ಪಾಲಿಕೆಯಲ್ಲಿನ KUWSSB ನೌಕರರು

1844(2486) ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕೆ.ಯು.ಡಬ್ಲ್ಯೂ. ಎಸ್. ಎಸ್. ಬಿ. ಇಲಾಖೆಯಿಂದ ಎರವಲು ಸೇವೆ ಮೇಲೆ ಎಷ್ಟು ನೌಕರರು ಸೇವೆ ಸಲ್ಲಿಸುತ್ತಿದ್ದಾರೆ;

ಆ. ಸದರಿ ನೌಕರರಿಗೆ ಬಡ್ತಿ ನೀಡಲಾಗಿದೆಯೇ (ನೀಡಿದ್ದರೆ ವಿವರ ನೀಡುವುದು)

ಇ. ಈ ನೌಕರರು ಕೆ.ಯು.ಡಬ್ಲ್ಯೂ.ಎಸ್.ಎಸ್.ಬಿ ಯಲ್ಲಿ ಯಾವ ಹುದ್ದೆಯಲ್ಲಿ ಇದ್ದರು; ಮಹಾನಗರ ಪಾಲಿಕೆಯಲ್ಲಿ ಯಾವ ಹುದ್ದೆಯಲ್ಲಿದ್ದಾರೆ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

ಅ. ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕೆ.ಯು.ಡಬ್ಲ್ಯೂ ಎಸ್.ಎಸ್.ಬಿ. ಇಲಾಖೆಯಿಂದ ಎರವಲು ಸೇವೆಯ ಮೇಲೆ 58+6 (64) ನೌಕರರು ಸೇವೆ ಸಲ್ಲಿಸುತ್ತಿದ್ದಾರೆ.

ಆ. ಇಲ್ಲ.

ಇ. ಈ ನೌಕರರು ಕೆ.ಯು.ಡಬ್ಲ್ಯೂ.ಎಸ್.ಎಸ್.ಬಿ ಯಲ್ಲಿದ್ದ ಹುದ್ದೆಯಲ್ಲಿಯೇ ಮಹಾನಗರ ಪಾಲಿಕೆಯಲ್ಲಿ ಮುಂದುವರಿದಿರುತ್ತಾರೆ.

ಬೆಂಗಳೂರು ನಗರದಲ್ಲಿ ಪಾದಚಾರಿ ರಸ್ತೆ ಹಾಗೂ ಕೆರೆಗಳ ಅಭಿವೃದ್ಧಿ

1847(1669) ಶ್ರೀ ಆರ್. ಅಶೋಕ್ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪಾದಚಾರಿ ರಸ್ತೆ ಅಭಿವೃದ್ಧಿಗೆ ಪಾಲಿಕೆ ನಿಗಧಿಪಡಿಸಿರುವ ಮೊತ್ತವೆಷ್ಟು?

ಆ. ರಸ್ತೆ ಬದಿಗಳ ಎಷ್ಟು ಕಿ.ಮೀ.ವ್ಯಾಪ್ತಿಯ ಪಾದಚಾರಿ ಮಾರ್ಗವನ್ನು ಈ ನಿಟ್ಟಿನಲ್ಲಿ ಗುರುತಿಸಲಾಗಿದೆ?

ಇ. ಈ ಅಭಿವೃದ್ಧಿ ಕಾಮಗಾರಿಗಳನ್ನು ಯಾವ ಯಾವ ಸಂಸ್ಥೆಗೆ ವಹಿಸಲು ತೀರ್ಮಾನಿಸಲಾಗಿದೆ?

ಈ. ಈ ಎಲ್ಲಾ ಯೋಜನೆಗಳಿಗೂ ಸಂಸ್ಥೆ ಮೂಲಕ ಆರ್ಥಿಕ ನೆರವೂ ನೀಡಲಾಗುವುದು?

ಉ. ಇವುಗಳ ಜೊತೆಯಲ್ಲಿ ನಗರದ ಪ್ರಮುಖ ಕರೆಗಳ ಜೀರ್ಣೋದ್ಧಾರ ಪುನರುಜ್ಜೀವನ ಗೊಳಿಸಲು ಎಷ್ಟು ಹಣ ತೆರೆದಿರಿಸಲಾಗಿದೆ? (ಕೆರೆಗಳ ವಿವರ ಒದಗಿಸಿ);

ಊ. ನಗರದಲ್ಲಿ ಹಾಲಿ ಜೀವಂತ ವಾಗಿರುವ ಕೆರೆಗಳೆಷ್ಟು? ಇವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

ಅ. ಪಾದಚಾರಿ ರಸ್ತೆ ಅಭಿವೃದ್ಧಿಗೆ ರೂ.70.00 ಕೋಟಿ ಅಂದಾಜು ಮಾಡಿದ್ದು ಮೊದಲನೇ ಹಂತದಲ್ಲಿ ರೂ.20.00 ಕೋಟಿ ಅಂದಾಜಿನ ಕಾಮಗಾರಿಯನ್ನು ಕೈಗೊಂಡಿದೆ.

ಆ. ಮೊದಲನೇ ಹಂತದಲ್ಲಿ 60 ಕಿ.ಮೀ.ಉದ್ದದ ರಸ್ತೆಯಲ್ಲಿ ಪಾದಚಾರಿ ರಸ್ತೆಯ ಅಭಿವೃದ್ಧಿ ಕೈಗೊಳ್ಳಲಾಗಿದೆ.

ಇ. ಕರ್ನಾಟಕ ಭೂಸೇನಾ ನಿಗಮಕ್ಕೆ ವಹಿಸಲಾಗಿದೆ.